ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 02.12.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳು.

ಉಪಸ್ಥಿತರು:

ಅನುಪಸ್ಥಿತರು:

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಪ್ರಾರಂಭಿಕ

1. ಮಂಗಳೂರು ವಿಶ್ವವಿದ್ಯಾನಿಲಯದ ಡೀನರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡ ಡಾ. ವೈ .ಮುನಿರಾಜು, ಡೀನರು, ವಾಣಿಜ್ಯ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಕುಲಪತಿಗಳು ಸಭೆಗೆ ಸ್ವಾಗತಿಸಿದರು.

2. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡ ಈ ಕೆಳಗಿನ ಪ್ರಾಂಶುಪಾಲರುಗಳನ್ನು ಮಾನ್ಯ ಕುಲಪತಿಗಳು ಸಭೆಗೆ ಸ್ವಾಗತಿಸಿದರು.

   ಅ. ಶ್ರೀಮತಿ ಲತಾ ಕುಮಾರಿ ಕೆ., ಪ್ರಾಂಶುಪಾಲರು, ನಿರಂಜನ ಸ್ವಾಮಿ ಕಾಲೇಜು, ಸುಂಕದಕಟ್ಟೆ, ಬಜಪೆ.

   ಆ. ಡಾ.ಗಂಗಾಧರ್ ಬಿ. ಪ್ರಾಂಶುಪಾಲರು, ಶ್ರೀ ಗೋಕರ್ಣನಾಥೇಶ್ವರ ಕಾಲೇಜು, ಮಂಗಳೂರು.

   ಇ. ಶ್ರೀಮತಿ ಸುಮಾ ಎಸ್. ರೈ, ಪ್ರಾಂಶುಪಾಲರು, ಡಾ. ಎಂ.ವಿ.ಶೆಟ್ಟಿ ಕಾಲೇಜ್ ಆಫ್ ಸೋಶಿಯಲ್ ವರ್ಕ್ ವಿದ್ಯಾನಗರ ಕೂಳೂರು, ಮಂಗಳೂರು.

3. ಮಂಗಳೂರು ವಿಶ್ವವಿದ್ಯಾನಿಲಯದ ಡೀನರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಡಾ.ಕಿಶೋರ್ ಕುಮಾರ್ ಸಿ.ಕೆ., ಡೀನರು, ಶಿಕ್ಷಣ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಸಿಂಡಿಕೇಟು ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಇವರನ್ನು ಸಿಂಡಿಕೇಟ್ ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ ಸದರಿಯವರು ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

4. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಈ ಕೆಳಗಿನ ಪ್ರಾಂಶುಪಾಲರುಗಳ ಸಿಂಡಿಕೇಟು ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಇವರುಗಳನ್ನು ಸಿಂಡಿಕೇಟ್ ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ, ಸದರಿ ಪ್ರಾಂಶುಪಾಲರುಗಳು ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

   ಅ. ಶ್ರೀಮತಿ ಆ್ಯನೆಟ್ ಫ್ಲೋರೆನ್ಸ್, ಪ್ರಾಂಶುಪಾಲರು, ಶ್ರೀನಿವಾಸ ಕಾಲೇಜ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್, ಪಾಂಡೇಶ್ವರ, ಮಂಗಳೂರು.

   ಆ. ಶ್ರೀ ಎಸ್. ಎಮ್. ಉಮಾಶಂಕರ್, ಪ್ರಾಂಶುಪಾಲರು, ಪ್ರಥಮ ದರ್ಜೆ ಕಾಲೇಜು, ಶನಿವಾರ ಸಂತೆ.

ಇ. ಡಾ.ಟಿ. ಜಯಪ್ರಕಾಶ್‌ರಾವ್, ಪ್ರಾಂಶುಪಾಲರು, ಎ.ಜೆ. ಇನ್ಸಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್, ಕೊಟ್ಟಾರ ಚೌಕಿ, ಮಂಗಳೂರು.

5. ವಿಶ್ವವಿದ್ಯಾನಿಲಯದ 35ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗಣ್ಯ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡುವ ಹಿನ್ನೆಲೆಯಲ್ಲಿ, ಸಂಭಾವ್ಯ ಪಟ್ಟಿಯನ್ನು ಸಭೆಯು ಸರ್ವಾನುಮತದಿಂದ ಅಂತಿಮಗೊಳಿಸಿ ತಯಾರಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ವಿ.ಸ:3:1(2016)

ವಿಷಯ: ಡಾ. ಜೆ ಶಾಮ ಸುಂದರ್, ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರು ವಿಶ್ವವಿದ್ಯಾನಿಲಯ, ಸರಕಾರ ಹಾಗೂ ಎಸ್‌ಸಿ/ಎಸ್‌ಟಿ ಆಯೋಗಕ್ಕೆ ಸಲ್ಲಿಸಿರುವ ಮನವಿ, ವಿಭಾಗದ ಅಧ್ಯಕ್ಷರಾದ ಡಾ. ಕೆ. ಕೃಷ್ಣ ಶರ್ಮ ಇವರ ವಿವರಣೆ, ವಿದ್ಯಾರ್ಥಿಗಳ ದೂರು ಇತ್ಯಾದಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ರಚಿಸಲಾದ ಸಮಿತಿಯ ವರದಿ ಬಗ್ಗೆ.

ನಿರ್ಣಯ: ಪರಿಶೀಲನಾ ಸಮಿತಿಯ ವರದಿಯನ್ನು ಹಾಗೂ ಸಮಿತಿ ಭೇಟಿಯ ನಂತರ ದಿನಾಂಕ 18.11.2016 ಮತ್ತು 21.11.2016ರಂದು ಡಾ. ಜೆ. ಶಾಮ ಸುಂದರ್‌ರವರು ಡಾ. ಕೃಷ್ಣ ಶರ್ಮರವರ ಕೋಣೆಗೆ ಬಂದು ಅವರನ್ನು ಅಶ್ಲೀಲ ಹಾಗೂ ಅವ್ಯಾಚ ಶಬ್ದಗಳಲ್ಲಿ ದೂಷಿಸಿ ಮೇಜಿನ ಮೇಲೆ ಕಾಲನ್ನಿಟ್ಟು ಹಲ್ಲೆ ನಡೆಸುವ ಬೆದರಿಕೆಯನ್ನು ಹಾಕಿದ್ದಾರೆಂದು ಡಾ. ಕೃಷ್ಣ ಶರ್ಮರವರು ನೀಡಿದ ದೂರು ಮತ್ತು ಪೂರಕ ದಾಖಲೆಗಳನ್ನು ಗಂಭೀರವಾಗಿ ಪರಿಗಣಿಸಿದ ಸಿಂಡಿಕೇಟ್ ಸಭೆಯು ಈ ಕುರಿತು ವಿಸ್ತೃತವಾಗಿ ಚರ್ಚಿಸಿತು. ವಿಭಾಗದ ಅಧ್ಯಕ್ಷರಿಂದ ಹಾಗೂ ವಿದ್ಯಾರ್ಥಿಗಳಿಂದ ಡಾ. ಶಾಮ ಸುಂದರ್‌ರವರು ತರಗತಿಗೆ ನಿರಂತರ ಗೈರು ಹಾಜರಾಗುತ್ತಿರುವುದು, ಸದರಿಯವರಿಂದ ನಡೆಯಬೇಕಾದ ಪಾಠ ಪ್ರವಚನಗಳು, ಪ್ರಾಕ್ಟಿಕಲ್ ತರಗತಿಗಳು ನಡೆಯದಿರುವ ಕುರಿತು ಬಂದಿರುವ ದೂರುಗಳನ್ನು ಕೂಡ ಸಭೆಯು ಪರಿಶೀಲಿಸಿತು. ಅಲ್ಲದೆ ಡಾ. ಜೆ. ಶಾಮ ಸುಂದರ್‌ರವರು ಡಾ. ಕೃಷ್ಣ ಶರ್ಮರವರ ಕೊಠಡಿಯಲ್ಲಿ ಅವರನ್ನು ಅತ್ಯಂತ ತುಚ್ಛವಾಗಿ, ಅಶ್ಲೀಲ ಭಾಷೆಯಲ್ಲಿ, ಸಂಯಮ ಮೀರಿ ಹೇಯವಾಗಿ ನಿಂದಿಸುತ್ತಿರುವುದನ್ನು, ಮೇಜಿನ ಮೇಲೆ ಕಾಲಿಟ್ಟು ಬೆದರಿಸುವ ಹಾಗೂ ಉಪನ್ಯಾಸಕರಿಗೆ ಸಲ್ಲದ ರೀತಿಯಲ್ಲಿ ಅಸಭ್ಯ ಹಾಗೂ ಅನಾಗರಿಕವಾಗಿ ವರ್ತಿಸುವ ದೃಶ್ಯಾವಳಿಗಳನ್ನು ವೀಕ್ಷಿಸಿತು. ಸಭ್ಯ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದನ್ನು ತೊರೆದು ವಿಶ್ವವಿದ್ಯಾನಿಲಯದ ನಿಯಮಾವಳಿಗಳನ್ನು ಉಲ್ಲಂಘಿಸಿ ಕಾನೂನನ್ನು ಕೈಗೆ ತೆಗೆದುಕೊಂಡ ಡಾ. ಶಾಮ ಸುಂದರ್‌ರವರ ವರ್ತನೆಯನ್ನು ಸಿಂಡಿಕೇಟ್ ಸಭೆಯು ಗಂಭೀರವಾಗಿ ಪರಿಗಣಿಸಿತಲ್ಲದೆ ಇಂತಹ ವರ್ತನೆಯು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸೇವಾ (ನಡತೆ) ನಿಯಮಾನುಸಾರ ಉದ್ಯೋಗಿಗೆ ಸಲ್ಲದ ವರ್ತನೆಯಾಗಿದ್ದು, ವಿಭಾಗದ ವಿದ್ಯಾರ್ಥಿಗಳ ಹಿತಾಸಕ್ತಿಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ಘನತೆಗೆ ತೀವ್ರ ಧಕ್ಕೆಯನ್ನುಂಟು ಮಾಡುವುದೆಂದು ಅಭಿಪ್ರಾಯಪಟ್ಟಿತು. ಇವರ ವರ್ತನೆ ಸಭ್ಯತೆಯ ಮೇರೆ ಮೀರಿದ್ದು, ಉಪನ್ಯಾಸಕ ವರ್ಗ ತಲೆತಗ್ಗಿಸುವಂತಹದ್ದು ಎಂದು ಭಾವಿಸಿತು.

ಪರಿಶೀಲನಾ ಸಮಿತಿಯ ವರದಿ ಹಾಗೂ ದಿನಾಂಕ 18.11.2016 ಮತ್ತು 21.11.2016 ರಂದು ಅವರ ಅಶಿಸ್ತಿನ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು ಡಾ. ಶಾಮ ಸುಂದರ್ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ನಿರ್ಧರಿಸಿತು. ವಿಶ್ವವಿದ್ಯಾನಿಲಯದ ಘನತೆಗೆ ಮಾರಕವಾಗಿರುವ ಇಂತಹ ಅಶಿಸ್ತನ್ನು ತೀವ್ರ ಕ್ರಮಗಳ ಮೂಲಕ ಮಟ್ಟ ಹಾಕಬೇಕೆಂದು ಒಕ್ಕೊರಳಿನಿಂದ ನಿರ್ಣಯಿಸಲಾಯಿತು.

ಡಾ. ಶಾಮ ಸುಂದರ್‌ರವರ ಮೇಲೆ ಕ್ರಮಕೈಗೊಳ್ಳುವ ಮೊದಲು ಕಾರಣ ಕೇಳಿ ನೋಟೀಸನ್ನು ನೀಡಿ, ಒಂದು ವಾರದೊಳಗೆ ವಿವರಣೆಯನ್ನು ಪಡೆದು ಅದನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ಕುಲಸಚಿವರಿಗೆ ಸೂಚಿಸಿತು.

ಡಾ. ಕೃಷ್ಣ ಶರ್ಮರವರು ತಮ್ಮ ದೂರಿನಲ್ಲಿ ತನಗೆ ಡಾ. ಶಾಮ ಸುಂದರ್‌ರವರಿಂದ ಹಲ್ಲೆ ನಡೆಯುವ ಸಾಧ್ಯತೆಯಿದ್ದು ಜೀವ ಬೆದರಿಕೆಯಿರುವುದರಿಂದ ಸೂಕ್ತ ರಕ್ಷಣೆ ನೀಡಬೇಕೆಂದು ಕೋರಿಕೊಂಡ ಹಿನ್ನಲೆಯಲ್ಲಿ ಅವರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕುಲಸಚಿವರಿಗೆ ಸೂಚಿಸಲಾಯಿತು. ಅಲ್ಲದೇ ಸದ್ರಿ ವಿಭಾಗದಲ್ಲಿ ಕಾನೂನು ಮತ್ತು ಶಿಸ್ತನ್ನು ಹಾಗೂ ಶೈಕ್ಷಣಿಕ ವಾತಾವರಣವನ್ನು ಕಾಯ್ದುಕೊಳ್ಳಲು ಪೂರಕವಾದ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಯವರಿಗೆ ಪೂರ್ಣ ಅಧಿಕಾರವನ್ನು ನೀಡಲು ಸಭೆಯು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಇಡಿ ವಿ.ಸ 3:2 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕ್ಲಾಸ್ ರೂಮ್ ಕಾಂಪ್ಲೆಕ್ಸ್ (Class Room Complex) ಕಾಮಗಾರಿಗಳಿಗೆ ಸಂಬಂಧಿಸಿ ವಿನ್ಯಾಸಗಳನ್ನು ಪರಿಷ್ಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 28.11.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸಿನಂತೆ ಉಪನ್ಯಾಸ ಕೊಠಡಿ ಸಂಕೀರ್ಣವನ್ನು ನಿರ್ಮಿಸುವ ಸ್ಥಳವನ್ನು ಸಿಂಡಿಕೇಟು ಸದಸ್ಯರು ಪರಿಶೀಲಿಸಿ ನೀಡಿದ ಅಭಿಪ್ರಾಯಗಳನ್ನು ಅನುಸರಿಸಿ ಕಟ್ಟಡ ವಿನ್ಯಾಸವನ್ನು G–2 ಎಂದು ಬದಲಾಯಿಸಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ನಿರ್ಣಯವನ್ನು ಅನುಮೋದಿಸಲಾಯಿತು. ಇದರಿಂದಾಗಿ ಸುಮಾರು ಒಂದೂವರೆ ಕೋಟಿಯಷ್ಟು ವೆಚ್ಚವು ಕಡಿಮೆಯಾಗುವುದೆಂದು ಸಭೆಗೆ ತಿಳಿಸಲಾಯಿತು. ಅಂತರ ರಾಷ್ಟ್ರೀಯ ಭವನವನ್ನು ಕಟ್ಟುವ ಸ್ಥಳದಲ್ಲಿ ಅಡಿಪಾಯದಲ್ಲಿ ಉಂಟಾಗುವ ಖಾಲಿ ಪ್ರದೇಶವನ್ನು ಮಣ್ಣಿನಿಂದ ತುಂಬಿಸುವ ಬದಲು ಅಲ್ಲಿ ಸುಮಾರು 24 ಕೊಠಡಿಗಳ ಕಟ್ಟಲು ಅನುವಾಗುವಂತೆ ವಿನ್ಯಾಸವನ್ನು ಬದಲಾಯಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಇದರಿಂದ ಉಂಟಾಗುವ ಹೆಚ್ಚುವರಿ ಎರಡೂವರೆ ಕೋಟಿ ರೂಪಾಯಿಗೆ ಅನುಮೋದನೆ ನೀಡಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನುಮುಕ್ತಾಯಗೊಳಿಸಿದರು.

ಕುಲಸಚಿವರು ಕುಲಪತಿಗಳು